CENTRAL UNIVERSITY
OF KARNATAKA

*(Established by an Act of the Parliament in 2009)*

CENTRAL UNIVERSITY OF KARNATAKA

Kadaganchi, Aland Road
Gulbarga 585 367
Phone (08477) – 226722
Telefax : 225703
Website: www.cuk.ac.in
Email: registrar@cuk.ac.in

No. CUK/ADMN-III/F-749/2020-21/867 17th March, 2021

# CIRCULAR

All the employees and the students of the University are hereby requested to watch the play ***"Iralu Hagalaguvudarolage (ನಾಟಕ: ಇರುಳು ಹಗಲಾಗುವುದರೊಳಗೆ)" at 4:30 p.m. on 19th March 2021*** at the Auditorium-1, near School of Business Studies, Central University of Karnataka, Kalaburagi. The Hon'ble Vice-Chancellor, CUK will inaugurate the performance of the play .

**Shri Shankarayya R. Ghanti,** Senior Stage Director, Janaranga will be the Chief Guest of the program.

All the teaching, non-teaching staff and students are informed to watch the play with their families following the COVID-19 guidelines.

17-3
***Registrar***
कुलसचिव/REGISTRAR
कर्नाटक केन्द्रीय विश्वविद्यालय
Central University of Karnataka
गुलबर्गा GULBARGA.

**To.**

1. All Deans/Heads/Coordinators/Directors of Department/Sections/Centres-*Requested to bring the content of the circular among respective students & staff.*
2. Dr. Vijaykumar V. Asst. Professor, Dept. of Kannada- *to coordinate the program.*
3. Dr. Deepathi, PRO, *for Media and Press coverage*
4. Mr. Sunil G. Asst. Registrar (CD) *for arrangement of Hall Electric and Sound System*

**Copy to:**

1) PS to Vice-Chancellor
2) All the Deans of Schools
3) Registrar, Finance Officer & COE
4) The Dean Students Welfare
5) The Librarian
6) All the Liaison Officers, EOC/OBC/Minority/EWS
7) All the Wardens of CUK Hostels
8) All the Deputy Registrars
9) The System Analyst: ***Requested to upload in CUK Website***
10) All the Assistant Registrars
11) All staffs of CUK
12) All the Notice Boards
13) The Deputy Director, Rajbasha Section (for Translation)
14) Concerned file.

# ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ

ಸಹಯೋಗ

# ಜನರಂಗ - ಕಲಬುರಗಿ (ರಿ)



## ನಾಟಕ : ಇರುಳು ಹಗಲಾಗುವುದರೊಳಗೆ

**ನಾಟಕ** : ಇರುಳು ಹಗಲಾಗುವುದರೊಳಗೆ
**ರಚನೆ** : ಶಂಕರ ಶೇಷ
**ಹಿಂದಿ ಮೂಲ** : ಆದಿ ರಾತ ಕೆ ಬಾದ್
**ಅನುವಾದ** : ಪ್ರಭಾಕರ ಸಾತಖೇಡ
**ನಿರ್ದೇಶನ** : ಶಂಕರಯ್ಯ ಆರ್. ಘಂಟಿ
**ಪ್ರಸ್ತುತಿ** : ಜನರಂಗ, ಕಲಬುರಗಿ

ದಿನಾಂಕ : 19.3.2021, ಸಮಯ : ಸಂಜೆ 4:30 ಗಂಟೆಗೆ.
ಸ್ಥಳ : ಆಡಿಟೋರಿಯಂ-1, ಸ್ಕೂಲ್ ಆಫ್ ಬಿಜಿನೆಸ್ ಸ್ಟಡೀಸ್ ಹತ್ತಿರ (ಸಿ.ಯು.ಕೆ)

ಉದ್ಘಾಟನೆ:

**ಪ್ರೊ. ಎಂ.ವಿ. ಅಳಗವಾಡಿ.** ಕುಲಪತಿಗಳು
ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ .

ಮುಖ್ಯ ಅತಿಥಿಗಳು :

**ಡಾ. ಬಸವರಾಜ ಡೋಣೂರ** ಕುಲಸಚಿವರು
ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ.

ಅತಿಥಿಗಳು :

**ಶಂಕರಯ್ಯ ಆರ್. ಘಂಟಿ**
ಹಿರಿಯ ರಂಗ ನಿರ್ದೇಶಕರು.

## ತಮ್ಮೆಲ್ಲರಿಗೂ ಆದರದ ಸ್ವಾಗತ

ನೀವಿದ್ದರೆ ನಾಟಕಕ್ಕೊಂದು ಕಳೆ..

# ನಾಟಕ : ಇರುಳು ಹಗಲಾಗುವುದರೊಳಗೆ

ಜಡ್ಜ್ ಮನೆಗೆ ಕಳವು ಮಾಡಲು ನುಗ್ಗಿದ ಕಳ್ಳ ಜಡ್ಜ್‌ಗೇ, ಸರ್ ಜಲ್ದಿ ಪೋಲಿಸರಿಗೆ ಪೋನ ಮಾಡ್ರಿ ! ನಾನು ಜೈಲಿಗೆ ಹೊಗಬೇಕು ಎಂದು ಜಡ್ಜಗೆ ದುಂಬಾಲು ಬಿಳುವ, ಕೌತುಲ ಹುಟ್ಟಿಸುವ ನಾಟಕ ತಮಾಷೆ ಎನಿಸಿದರೂ ದೃಶ್ಯದಿಂದ ದೃಶಕ್ಕೆ ತೆರೆದುಕೊಳ್ಳುತ್ತ ಸಮಾಜದಲ್ಲಿ ನಡೆಯುವ ಘಾತುಕ ಚಟುವಟಿಕೆ, ಕಾನೂನಿನ ಕಣ್ಣಿಗೆ ಮಣ್ಣೆರಚುವ ಮಾಫಿಯಾ, ಪೋಲಿಸರ ಬುದ್ದಿವಂತಿಕೆ, ನಗರದ ಹೆಣ್ಣು ಗಂಡಿನ ಪ್ರಣಯ ಪ್ರಸಂಗ, ಹೀಗೆ ಹಲವಾರು ಬದುಕಿನ ಸಂಕೀರ್ಣಗಳನ್ನು ಬಯಲಿಗೆಳೆಯುತ್ತಾ ಹೋಗುತ್ತದೆ ಈ ನಾಟಕ.

ಕಳ್ಳ ಜಡ್ಜನ ಮನೆಯಲ್ಲೇ ಚಹಾ ಮಾಡಿ, ಜಡ್ಜಗೂ ಕೊಟ್ಟು,ಅಪರಾಧ ಮತ್ತು ಪಾಪದ ಬಗ್ಗೆ ವಿಮರ್ಶಿಸುವುದು ಪತ್ತೇದಾರಿ ಕಥೆಯಂತೆ ಕುತೂಹಲ ಹುಟ್ಟಿಸುತ್ತದೆ. ರಾಜಕೀಯ ವ್ಯವಸ್ಥೆಯ ಇಂದಿನ ನ್ಯಾಯಾಲಯ ಎತ್ತ ಸಾಗುತ್ತಿದೆ ಎಂಬುದರ ಬಗ್ಗೆ ಕನ್ನಡಿ ಹಿಡಿವ ನಾಟಕವನ್ನು ನೋಡಿಯೇ ಆನಂದಿಸಬೇಕು. ಅಪರಾಧ, ಪಾಪ, ಮೋಸ - ವಂಚನೆ ಇವುಗಳ ಬಗ್ಗೆ ಕಳ್ಳ ಎನು ಹೇಳುತ್ತಾನೆ ಎನ್ನುವುದನ್ನು ನೋಡಿಯೇ ತಿಳಿಯೋಣ.

**ನಾಟಕಕಾರ ಶಂಕರ ಶೇಷ :** (೧೯೩-೧೯೮೧)ಹಿಂದಿಯ ಅಗ್ರಗಣ್ಯ ನಾಟಕಕಾರರಲ್ಲಿ ಒಬ್ಬರು. ಪ್ರಗತಿಪರ ಚಿಂತಕರಾದ ಇವರು ವರ್ತಮಾನದ ಗಂಭೀರ ಸಮಸ್ಯೆಗಳನ್ನು ರಂಗದ ಮೂಲಕ ವಿಶ್ಲೇಸಿಸುವ, ಭಾರತೀಯ ರಂಗ ಭೂಮಿಯ ಮಹತ್ವದ ಲೇಖಕರು. ಇವರ ಏಕ ಔರ್ ದ್ರೋಣಾಚಾರ, ರಕ್ತಬೀಜ, ಪೋಸ್ಟರ್, ಕೋಮಲ್ ಗಾಂಧಾರ್, ಮುಂತಾದ ರಂಗ ಕೃತಿಗಳು ಇಡೀ ದೇಶಾದಾದ್ಯಂತ ಬೇರೆ ಬೇರೆ ಭಾಷೆಯಲ್ಲಿ ಬೇರೆ ಬೇರೆ ಪ್ರಕಾರಗಳಲ್ಲಿ ಪ್ರದರ್ಶನಗೊಂಡಿವೆ. ಘರೋಂದಾ, ದೂರಿಯಾಂ, ಪೋಸ್ಟರ್, ಮುಂತಾದವುಗಳು ಚಲನ ಚಿತ್ರಗಳಾಗಿವೆ. ಗೋವಿಂದ ನಿಹಲಾನಿ, ಶಾಮ್ ಬೆನಗಲ್, ಸಿನಿಮಾಗಳಿಗೆ ಶ್ರೀಯುತರು ಚಿತ್ರಕಥೆ ಬರೆದಿದ್ದಾರೆ.

**ಅನುವಾದಕರು ಪ್ರಭಾಕರ ಸಾತಖೇಡ :** ಕರ್ನಾಟಕ ನಾಟಕ ಅಕಾಡೆಮಿಯ ಮಾಜಿ ಸದಸ್ಯರಾದ ಶ್ರೀಯುತರ ರಂಗ ಭೂಮಿ ಸೇವೆಯನ್ನು ಗುರುತಿಸಿದ ಅಕಾಡೆಮಿ ರಂಗ ಗೌರವ ನೀಡಿ ಸನ್ಮಾನಿಸಿದೆ. ಕಲಬುರಗಿ ರಂಗ ಮಾಧ್ಯಮ ತಂಡಕ್ಕೆ ಇವರು ಸನಾದಿಯೂ ಹೌದು, ಬುನಾದಿಯೂ ಹೌದು. ಇಂಗ್ಲಿಷ, ಹಿಂದಿ, ಮರಾಠಿ, ಸಾಹಿತ್ಯವನ್ನು ಕನ್ನಡಿಕರಿಸಿದ್ದಾರೆ. ಶ್ರೀಪ್ರಭಾಕರ ಸಾತಖೇಡ ಅವರು ಉಪನ್ಯಾಸಕರಾಗಿ ವೃತ್ತಿಯಿಂದ ನಿವೃತ್ತಿ ಹೊಂದಿದರೂ ರಂಗ ಪ್ರವೃತ್ತಿಯಿಂದ ಅವರಿಗೆ ಬಿಡುಗಡೆಯೇ ಇಲ್ಲ.

**ನಿರ್ದೆಶಕ ಶಂಕರಯ್ಯ ಆರ್. ಘಂಟಿ :** ಕಲಬುರಗಿ ಮತ್ತು ಬೀದರ ಜಿಲ್ಲೆಗಳಲ್ಲಿ ಭಾರತದ ಜ್ಞಾನ ವಿಜ್ಞಾನ ಸಮೀತಿಗಳನ್ನು ಕಟ್ಟಿ ಬೆಳೆಸಿದವರಲ್ಲಿ ಇವರು ಮೋದಲಿಗರು, ಒಂದು ಕಥಾ ಸಂಕಲನ, ೨ ಕವಿತಾ ಸಂಕಲನ,೯ ನಾಟಕ, ೨ ಬೀದಿ ರಂಗ ಕೃತಿಗಳು, ದಲಿತ ಕಥಾರಂಗ ರೂಪಕಗಳು (ಸಂಪಾದನೆ), ಸಾಹಿತ್ಯ ಲೋಕಕ್ಕೆ ಅವರು ಮೂಡಿಸಿದ ಗರಿಗಳು. ಇವೆಲ್ಲವನ್ನು ಗುರುತಿಸಿದ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಧಾರವಾಡದ ಬಾಲ ವಿಕಾಸ ಅಕಾಡೆಮಿಯು ಮಕ್ಕಳ ರಂಗ ಭೂಮಿಗೆ ನೀಡಿದ ಇವರ ಸೇವೆಯನ್ನು ಗುರುತಿಸಿ ೨೦೧೪-೧೫ರಲ್ಲಿ ಗೌರವ ಪ್ರಶಸ್ತಿ ನೀಡಿದ್ದು ಇವರ ಪ್ರತಿಭೆಗೆ ಸಾಕ್ಷಿ. ಶ್ರೀಯುತರು ಸಮುದಾಯ ಸಾಂಸ್ಕೃತಿಕ ಸಂಘಟನೆಗೆ ದುಡಿದು ರಾಜ್ಯದಾದ್ಯಂತ ಗುರುತಿಸಿಕೊಂಡಿದ್ದಾರೆ.

ಮಹಿಮಾಪುರ (ಪ್ರಸನ್ನ) ಹುಲಿಗೆಮ್ಮ (ಬ.ಸಬರದ)ಜಾತಿ ಧರ್ಮಗಳಾಚೆ (ಶಾಂತರಸ) ಬೇರುಗಳು (ಇಸ್ಮತ್ ಚುಗ್ತಾಯಿ) ಸಾಕ್ರಟೀಸ್ (ಆರ್.ಡಿ. ಕಾಮತ್), ಜಲ (ಮ.ನ.ಜವರಯ್ಯ), ಹ್ಯಾಮ್ಲೆಟ್ (ಶೇಕ್ಸ್ ಪೀಯರ್) ಸನ್ಮಾನ್ಯ ಸಚಿವರ ಸಾವು (ನವಲ ಆಲ್ ಸದವಿ), ಚಂದ್ರಗುಪ್ತ ಮೌರ್ಯನೆಂಬ ನಾನು (ಮಹಾಂತೇಶ ನವಲಕಲ್) ಕೆಟ್ಟಿತ್ತು ಕಲ್ಯಾಣ (ಡಾ.ಎಂ.ಎಂ. ಕಲಬುರಗಿ) ದೊರೆ ಈಡಿಪಸ್, ಅಂತಿಮಗೊನೆ (ಸಾಪೋಕ್ಲಿಸ್-ಅನು: ಪಿ. ಲಂಕೇಶ), ರಸಗಂಗಾಧರ (ಡಾ. ವಿಕ್ರಮ ವಿಸಾಜಿ) ಚಾಂಡಾಲಿಕಾ (ಟ್ಯಾಗೂರ) ಹೀಗೆ ೪೫ ಕ್ಕು ಹೆಚ್ಚು ನಾಟಕಗಳನ್ನು ನಿರ್ದೇಶಿಸಿದ್ದಾರೆ.

**ಜನರಂಗ (ರಿ) ಕಲಬುರಗಿ:** ಜನರಂಗ ಕಲಬುರಗಿ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಸೇವಾ ಸಂಸ್ಥೆಯು ಸಮಾನ ಮನಸ್ಕರು, ಸಮೂಹ ಸೃಷ್ಠಿಗಾಗಿ ಕಟ್ಟಿಕೊಂಡ ಸಾಂಸ್ಕೃತಿಕ ಸಂಘಟನೆ. ಕಥೆ ಕಾವ್ಯಗಳಿಗೆ ಗೃಹಗೋಷ್ಠಿ ಸಾಹಿತ್ಯ ಸಂವಾದ,ಕವಿಗೋಷ್ಠಿ ರಂಗ ವಾಚನ ಮುಂತಾದ ಮಹತ್ವದ ಚಟುವಟಿಕೆ ಹಾಗೂ ಶೈಕ್ಷಣಿಕ ಮೌಲ್ಯಕ್ಕಾಗಿ ದುಡಿಯುವ ವಿವಿದೋದ್ದೇಶದ ಸಂಘಟನೆ. ಕೊಡಗಿನ ಸಂತ್ರಸ್ಥರ ನೆರವಿಗಾಗಿ ೨೦೧೭ ರಲ್ಲಿ ರಾವಿ ನದಿಯ ದಂಡೆಯಲ್ಲಿ ಎಂಬ ನಾಟಕ ಪ್ರದರ್ಶಿಸಿ, ಸಂತ್ರಸ್ಥರ ನೆರವಿಗೆ ಸಹಾಯಧನ ನೀಡಿದೆ. ಮಕ್ಕಳ ಬೇಸಿಗೆ ಶಿಬಿರ, ಚಿತ್ರಕಲಾ ಪ್ರದರ್ಶನ ಮುಂತಾದ ಅನೇಕ ಕೆಲಸಗಳನ್ನು ಮಾಡುತ್ತಿದೆ ಈಗ ಕಲಾವಿದರಿಗಾಗಿ ರಂಗ ಕಾರ್ಯಗಾರ. ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ ಕಡಗಂಚಿಯ ಸಾಂಸ್ಕೃತಿಕ ವಿನಿಮಯಕ್ಕಾಗಿ ಈ ನಾಟಕ.

**ರಂಗದ ಮೇಲೆ:**

ಭೈರವ ಪೂಜಾರಿ - ಕಳ್ಳ

ಉಮೇಶ ಪಾಟೀಲ - ಜಡ್ಜ

ಅಂಬರೀಶ - ಪತ್ರಕರ್ತ

**ರಂಗದ ಹಿಂದೆ**

ರಂಗ ನಿರ್ವಹಣೆ : ಸಾಗರ

ಸಂಗೀತ : ಲಕ್ಷ್ಮೀಕಾಂತ ಪಾಟೀಲ, ಕಲ್ಯಾಣಿ ಬಜಂತ್ರಿ

ರಂಗ ಸಜ್ಜಿಕೆ : ಬಾಬುರಾವ ಎಚ್.ಜಗದೀಶ ಪಾಟೀಲ

ರಂಗ ಪರಿಕರ : ಅಪೂರ್ವಲಾಲ್ ನಥಾಪ, ಅಂಬರೀಶ

ಪ್ರಸಾಧನ : ವಿಜಯಲಕ್ಮೀ ದೊಡ್ಡಮನಿ

ಬೆಳಕು : ಅನೀಲ ರೇವೂರ

ನಿರ್ದೇಶನ : ಶಂಕರಯ್ಯ ಆರ್. ಘಂಟಿ